# ಅನರ್ಹತೆಗೆ ಸ್ಪೀಕರ್ ಕೊಟ್ಟ ಕಾರಣಗಳೇನು?

■ **ವಿಕ ಸುದ್ದಿಲೋಕ** ಬೆಂಗಳೂರು

ಎಐಎಡಿಎಂಕೆಯ 18 ಶಾಸಕರ ವಿಚಾರದಲ್ಲಿ ತಮಿಳುನಾಡು ವಿಧಾನಸಭೆ ಸ್ಪೀಕರ್ ಧನಪಾಲ್ ಕೈಗೊಂಡ ನಿರ್ಧಾರವನ್ನೇ ಕರ್ನಾಟಕ ಸ್ಪೀಕರ್ ರಮೇಶ್ ಕುಮಾರ್ ತಮ್ಮ ತೀರ್ಪಿಗೆ ಸಮರ್ಥನೆಯಾಗಿ ಬಳಸಿಕೊಂಡಿದ್ದಾರೆ.

''ರವಿನಾಯಕ್ ಮತ್ತು ಕೇಂದ್ರ ಸರಕಾರ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ತೀರ್ಪು ಇವುಗಳನ್ನು ಆಧಾರವಾಗಿಟ್ಟುಕೊಂಡು ತಾವು ಈ ತೀರ್ಮಾನ ಕೈಗೊಂಡಿರುವುದಾಗಿ'' ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.



## ಪಕ್ಷಾಂತರಿ ಶಂಕರ್‌ಗೆ ಶಿಕ್ಷೆ

■ ರಾಣೆಬೆನ್ನೂರು ಕ್ಷೇತ್ರದಿಂದ ಕೆಪಿಜೆಪಿ ಪಕ್ಷದ ಆಟೋರಿಕ್ಷಾ ಚಿಹ್ನೆಯಡಿ ವಿಧಾನಸಭೆಗೆ ಆಯ್ಕೆಯಾಗಿದ್ದ ಶಂಕರ್ ಅವರು ಜೂ.14 ರಂದು ತಮಗೆ ಪತ್ರ ನೀಡಿ ಕೆಪಿಜೆಪಿಯನ್ನು ಕಾಂಗ್ರೆಸ್‌ನಲ್ಲಿ ವಿಲೀನ ಮಾಡುವುದಾಗಿ ತಿಳಿಸಿದ್ದರು. ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರೂ ಇದನ್ನು ಅನುಮೋದಿಸಿದ್ದರು.

■ ಆದರೆ, ಜು.8 ರಂದು ಶಂಕರ್ ಅವರು ಮತ್ತೊಬ್ಬ ಪಕ್ಷೇತರ ಶಾಸಕ ನಾಗೇಶ್ ಅವರೊಟ್ಟಿಗೆ ರಾಜ್ಯಪಾಲರನ್ನು ನೇರವಾಗಿ ಭೇಟಿ ಮಾಡಿ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ,ಬಿಜೆಪಿಗೆ ಬೆಂಬಲ ನೀಡುವುದಾಗಿ ಘೋಷಿಸಿದರು. ಈ ಪತ್ರವನ್ನು ರಾಜ್ಯಪಾಲರು ನನಗೆ ರವಾನೆ ಮಾಡಿದ್ದರು. ಶಂಕರ್ ಅವರ ಈ ತೀರ್ಮಾನ ಪಕ್ಷಾಂತರ ನಿಷೇಧ ಕಾಯಿದೆ ಉಲ್ಲಂಘನೆ ಎಂದು ಸಿಎಲ್‌ಪಿ ನಾಯಕ ಸಿದ್ದರಾಮಯ್ಯ ದೂರು ಸಲ್ಲಿಸಿದ್ದರು. ಇದು 1985ರ ಶೆಡ್ಯೂಲ್ 10ರಡಿ ಪಕ್ಷಾಂತರ.

## ಜಾರಕಿಹೊಳಿ, ಕುಮಟಳ್ಳಿ ಅನರ್ಹ

■ ಕಾಂಗ್ರೆಸ್‌ನ ರಮೇಶ್ ಜಾರಕಿಹೊಳಿ, ಮಹೇಶ್ ಕುಮಟಳ್ಳಿ, ಉಮೇಶ್ ಜಾಧವ್ ಮತ್ತು ಬಿ.ನಾಗೇಂದ್ರ ಅನರ್ಹತೆಗೆ ಕಾಂಗ್ರೆಸ್ ಕಳೆದ ಫೆ.11 ರಂದು ದೂರು ಸಲ್ಲಿಸಿತ್ತು. ಮತ್ತೆ ದೂರು ಮಾರ್ಪಡಿಸಿ ಉಮೇಶ್ ಜಾಧವ್ ಮತ್ತು ನಾಗೇಂದ್ರ ಅವರನ್ನು ಕೈಬಿಡಲು ಕಾಂಗ್ರೆಸ್ ಕೋರಿತು.

■ ಜು.8 ರಂದು ಸಿಎಲ್‌ಪಿ ನಾಯಕರಿಂದ ರಮೇಶ್ ಜಾರಕಿಹೊಳಿ ಮತ್ತು ಮಹೇಶ್ ಕುಮಟಳ್ಳಿ ವಿರುದ್ಧ ಮತ್ತೆ ದೂರು ನೀಡಿದರು. ಈ ಇಬ್ಬರ ರಾಜೀನಾಮೆ ಸ್ವಯಂಪ್ರೇರಿತ ಮತ್ತು ನೈಜತೆಯಿಂದ ಕೂಡಿವೆ ಎಂದು ಮನವರಿಕೆಯಾಗಿಲ್ಲ.

ಜತೆಗೆ ಅವರು, ರಾಜೀನಾಮೆ ನೀಡುವ ದಿನ ವಿಶೇಷ ವಿಮಾನದಲ್ಲಿ ಬಂದಿದ್ದರು. ಸುಪ್ರೀಂಕೋರ್ಟ್‌ನಲ್ಲಿ ಅವರು ಸಲ್ಲಿಸಿದ ಅರ್ಜಿಯಲ್ಲಿ ಉಲ್ಲೇಖಿಸಿದ್ದ ಮಾಹಿತಿ ಸುಳ್ಳಾಗಿತ್ತು ಎಂಬುದನ್ನೂ ಆ ಶಾಸಕರು ಒಪ್ಪಿಕೊಂಡರು. ಆ ವಿಡಿಯೋ ಚಿತ್ರೀಕರಿಸಿ ಕೋರ್ಟ್‌ಗೂ ತಲುಪಿಸಲಾಗಿದೆ. ಈ ನಡವಳಿಕೆ ಆಧಾರದ ಮೇಲೆ ಈ ಇಬ್ಬರನ್ನೂ ಅನರ್ಹ ಮಾಡಲಾಗಿದೆ ಎಂದು ಸ್ಪೀಕರ್ ವಿವರಣೆ ನೀಡಿದರು.